ಆರ್.ಬಿಐ./2007–2008/318
ಆರ್.ಪಿ.ಸಿ.ಡಿ.ಸಿಒ.ಆರ್.ಎಫ್.ಬಿಸಿ.ನಂ. 69/07.06.00/2007–2008

ಮೇ 13, 2008
23 ವೈಶಾಖ, ಶಕ 1930

ಗೆ,
ಎಲ್ಲ ರಾಜ್ಯ ಮತ್ತು ಕೇಂದ್ರಿಯ ಸಹಕಾರ ಬ್ಯಾಂಕುಗಳು

ಮಾನ್ಯರೇ,

**ಶಿಲ್ಕು ವಿಚಾರಣೆ ಮತ್ತು ಹಣ ಹಿಂತೆಗೆತಕ್ಕೆ ಬಳಸಲಾದ ಎ.ಟಿ.ಯಂ.ಗಳ ಗ್ರಾಹಕ ಶುಲ್ಕಗಳು**

ಭಾರತದ ಬ್ಯಾಂಕಿಂಗ್ ವ್ಯವಹಾರದಲ್ಲಿ ಸುಗಮ–ವಿತರಣೆ ಮಾರ್ಗವಾಗಿ ಸ್ವಯಂಚಾಲಿತ ಹಣನೀಡಿಕೆ ಯಂತ್ರಗಳು(ಎ.ಟಿ.ಯಂ) ಪ್ರಾಧಾನ್ಯತೆ ಪಡೆದುಕೊಂಡಿವೆ. ಗ್ರಾಹಕ ಸಾಮೀಪ್ಯದ ಹೆಚ್ಚಳಕ್ಕಾಗಿ ಬ್ಯಾಂಕುಗಳು ಎ.ಟಿ.ಯಂ.ಗಳನ್ನು ನಿಯೋಜಿಸುತ್ತಿವೆ. ಗ್ರಾಹಕರಿಗೆ ಎ.ಟಿ.ಯಂ.ಗಳು ಹಲವು ವಿಧವಾದ ಬ್ಯಾಕಿಂಗ್ ವ್ಯವಹಾರಗಳನ್ನು ನೀಡುತ್ತಿದ್ದರೂ, ಹಣ ಹಿಂಪಡೆಯುವುದು ಮತ್ತು ಶಿಲ್ಕು ವಿಚಾರಣೆಗೆಗಾಗಿಯೇ ಹೆಚ್ಚಾಗಿ ಅವುಗಳು ಬಳಕೆಯಾಗುತ್ತಿವೆ. ಡಿಸೆಂಬರ್ 2007 ಅಂತ್ಯದ ವೇಳೆಗೆ ಭಾರತದಲ್ಲಿ 32,342 ಎ.ಟಿಯಂ.ಗಳನ್ನು ನಿಯೋಜಿಸಲಾಗಿತ್ತು. ಬ್ಯಾಂಕ್ ಶಾಖೆಗಳ ಜಾಲಾನುಸಾರ ದೊಡ್ಡ ಗಾತ್ರದ ಬ್ಯಾಂಕುಗಳು ಹೆಚ್ಚಿನ ಸಂಖ್ಯೆಯ ಎ.ಟಿ.ಯಂ.ಗಳನ್ನು ನಿಯೋಜಿಸಿವೆ. ಹೆಚ್ಚು ಗ್ರಾಹಕರನ್ನು ಹೊಂದಿರುವ ಅಥವಾ ಹೆಚ್ಚಿನ ಬಳಕೆಯ ನಿರೀಕ್ಷೆಯಿರುವ ಸ್ಥಳಗಳಲ್ಲಿ ಎ.ಟಿ.ಯಂ.ಗಳ ನಿಯೋಜನೆಯನ್ನು ಹೆಚ್ಚಿನ ಸಂಖ್ಯೆಯ ಬ್ಯಾಂಕುಗಳು ಬಯಸುತ್ತವೆ. ಬ್ಯಾಂಕಿಂಗ್ ವ್ಯವಹಾರದಲ್ಲಿ ಸುಗಮ–ವಿತರಣೆ ಮಾರ್ಗವಾಗಿ ಸ್ವಯಂಚಾಲಿತ ಹಣನೀಡಿಕೆ ಯಂತ್ರಗಳ ಬಳಕೆಯನ್ನು ಹೆಚ್ಚಿಸುವ ಸಲುವಾಗಿ ಬ್ಯಾಂಕುಗಳು ಅಂತರ್–ಬ್ಯಾಂಕ್ ಎ.ಟಿ.ಯಂ.ಗಳ ಸಂಪರ್ಕಜಾಲದ ವ್ಯವಸ್ಥೆಗಾಗಿ ದ್ವಿಪಕ್ಷೀಯ ಮತ್ತು ಬಹುಪಕ್ಷೀಯ ವ್ಯವಸ್ಥೆಗೆ ಒಲವು ತೋರಿಸಿವೆ.

2. ಬ್ಯಾಂಕಿಂದ ಬ್ಯಾಂಕಿಗೆ ಮತ್ತು ಈ ವ್ಯವಹಾರಕ್ಕಾಗಿ ಬಳಸುವ ಏ.ಟಿಯಂ ಜಾಲಕ್ಕೆ ಅನುಗುಣವಾಗಿ ಗ್ರಾಹಕ ಶುಲ್ಕದಲ್ಲಿ ವ್ಯತ್ಯಯವಿರುವುದು ಸ್ಪಷ್ಟವಾಗಿದೆ. ಆದ್ದರಿಂದ, ಗ್ರಾಹಕನಿಗೆ ನಿರ್ದಿಷ್ಟ ಬ್ಯಾಂಕಿನ ಎ.ಟಿ.ಯಂ ಬಳಕೆ ಮಾಡುವಾಗ, ಬೇರೆ ಬ್ಯಾಂಕಿನ ಏ.ಟಿ.ಯಂ.ನ ಬಳಕೆಗೆ ವಿಧಿಸಲಾಗುವ ಶುಲ್ಕದ ಅರಿವು ಮುಂಚಿತವಾಗಿಯೇ ಇರುವುದಿಲ್ಲ. ಇದು ಸಾಮಾನ್ಯವಾಗಿ ಬೇರೆ ಬ್ಯಾಂಕಿನ ಎ.ಟಿ.ಯಂಗಳ ಬಳಕೆಯನ್ನು ಕುಂಠಿತಗೊಳಿಸುತ್ತದೆ. ಆದ್ದರಿಂದ ಇಲ್ಲಿ ಹೆಚ್ಚಿನ ಪಾರದರ್ಶಕತೆ ಇರುವಂತೆ ನೋಡಿಕೊಳ್ಳುವುದು ಅತ್ಯವಶ್ಯ.

3. ಹಣ ಹಿಂಪಡೆಯುವುದಕ್ಕಾಗಿ ಬಿಳಿ ಲೇಬಲ್ ಹೊಂದಿದ ಎ.ಟಿ.ಯಂ ಅಥವಾ ಬ್ಯಾಂಕೇತರ ಘಟಕಗಳು ನಿರ್ವಹಿಸುವ ಎ.ಟಿ.ಯಂ.ಗಳ ಬಳಕೆಯನ್ನು ಹೊರತುಪಡಿಸಿ ಗ್ರಾಹಕರಿಗೆ ಎ.ಟಿ.ಯಂ.ಗಳ ಬಳಕೆ ಉಚಿತವಾಗಿರುತ್ತದೆ ಎಂಬುದನ್ನು ಯು.ಕೆ, ಜರ್ಮನಿ ಮತ್ತು ಫ್ರಾನ್ಸ್ ನಂತಹ ದೇಶಗಳಿಂದ ಪಡೆದ ಅಂತರ್–ರಾಷ್ಟ್ರೀಯ ಅನುಭವ ತಿಳಿಯುತ್ತದೆ. ಸಾರ್ವಜನಿಕ ನೀತಿಯ

ದೃಷ್ಟಿಕೋನದಿಂದ, ನಿಯಂತ್ರಣ ಪ್ರಾಧಿಕಾರವು ಶುಲ್ಕವನ್ನು ನಿಯಂತ್ರಿಸುವ ಬಗ್ಗೆ ಅಂತರ್–ರಾಷ್ಟ್ರೀಯ ಮಟ್ಟದಲ್ಲಿ ಚಿಂತನೆ ನಡೆದಿದೆ. ಬ್ಯಾಂಕುಗಳ ನೀತಿ ಸಮ್ಮತ ಸಹಕಾರದ ಹೆಜ್ಜೆಯ ಮೂಲಕ, ಗ್ರಾಹಕನು ದೇಶದಲ್ಲಿ ನಿಯೋಜಿಸಿದ ಯಾವುದೇ ಎ.ಟಿ.ಯಂ.ನ್ನು ಶುಲ್ಕರಹಿತವಾಗಿ ಬಳಸುವಂತಹ ಮಾದರಿ ಸನ್ನಿವೇಶ ನಿರ್ಮಾಣವೇ ಇದರ ಉದ್ದೇಶ.

4. ಈ ಉದ್ದೇಶಕ್ಕಾಗಿ, ಭಾರತೀಯ ರಿಸರ್ವ್ ಬ್ಯಾಂಕ್, ತನ್ನ ವೆಬ್‌ತಾಣದಲ್ಲಿ ಸಂಪರ್ಕಪತ್ರವನ್ನು ಪ್ರದರ್ಶಿಸಿ ಸಾರ್ವಜನಿಕರ ಆಭಿಪ್ರಾಯವನ್ನು ಆಹ್ವಾನಿಸಿತು. ಸ್ವೀಕರಿಸಿದ ಆಭಿಪ್ರಾಯಗಳನ್ನು ಪರಾಮರ್ಶಿಸಲಾಯಿತು. ಪ್ರತಿಕ್ರಿಯೆಗಳ ಆಧಾರದಲ್ಲಿ ಬ್ಯಾಂಕುಗಳು ಸೇವಾಶುಲ್ಕಗಳ ಚೌಕಟ್ಟನ್ನು ಈ ಕೆಳಗಿನಂತೆ ಜಾರಿಗೊಳಿಸುತ್ತವೆ.

| **ಕ್ರಮ ಸಂಖ್ಯೆ** | **ಸೇವೆ** | **ಶುಲ್ಕ** |
|---|---|---|
| (1) | ಯಾವುದೇ ಉದ್ದೇಶಕ್ಕಾಗಿ ಸ್ವಂತ ಎ.ಟಿ.ಯಂ.ನ ಬಳಕೆ | ಉಚಿತ(ತಕ್ಷಣ ಜಾರಿಗೆ ಬರುವಂತೆ) |
| (2) | ಶಿಲ್ಕು ತಿಳಿಯುವುದಕ್ಕಾಗಿ ಬೇರೆ ಬ್ಯಾಂಕುಗಳ ಎ.ಟಿ.ಯಂ.ಗಳ ಬಳಕೆ | ಉಚಿತ(ತಕ್ಷಣ ಜಾರಿಗೆ ಬರುವಂತೆ) |
| (3) | ಹಣ ಹಿಂಪಡೆಯುವುದಕ್ಕಾಗಿ ಬೇರೆ ಬ್ಯಾಂಕ್ ಎ.ಟಿ.ಯಂ.ಗಳ ಬಳಕೆ | • ಪ್ರತಿ ವ್ಯವಹಾರಕ್ಕೆ ರೂ. 20/–ಕ್ಕಿಂತ ಹೆಚ್ಚಾಗಿ ಶುಲ್ಕ ವಿಧಿಸುತ್ತಿರುವ ಬ್ಯಾಂಕುಗಳು ಮಾರ್ಚ್ 31, 2008ರ ಒಳಗಾಗಿ ಪ್ರತಿ ವ್ಯವಹಾರಕ್ಕೆ ಗರಿಷ್ಠ ರೂ. 20/–ಕ್ಕೆ ಶುಲ್ಕವನ್ನು ತಕ್ಷಣ ಜಾರಿಗೆ ಬರುವಂತೆ ಕಡಿತಗೊಳಿಸಬೇಕು<br>• ಎಪ್ರಿಲ್ 1, 2009ರಿಂದ ಜಾರಿಗೆ ಬರುವಂತೆ ಉಚಿತವಾಗಿರಬೇಕು. |

5. ಮೇಲೆ ತಿಳಿಸಿದ (1) ಮತ್ತು (2)ನೇ ವರ್ಗದ ಸೇವೆಗಳಿಗೆ ಗ್ರಾಹಕನಿಗೆ ಯಾವುದೇ ಇತರ ಶೀರ್ಷಿಕೆಯಡಿ ಇನ್ನಾವುದೇ ಶುಲ್ಕ ವಿಧಿಸಲಾಗುವುದಿಲ್ಲ ಮತ್ತು ಸೇವೆ ಸಂಪೂರ್ಣ ಉಚಿತವಾಗಿರುತ್ತದೆ.

6. ಸಂಖ್ಯೆ (3)ರಲ್ಲಿ ತಿಳಿಸಿದ ಸೇವೆಗೆ, ಹಿಂಪಡೆದ ಮೊತ್ತವನ್ನು ಪರಿಗಣಿಸದೆ, ವಿಧಿಸಲಾಗುವ ರೂ 20/–ಗಳ ಶುಲ್ಕವು ಎಲ್ಲವನ್ನೂ ಒಳಗೊಂಡಿರುತ್ತದೆ ಮತ್ತು ಇತರ ಯಾವುದೇ ಶುಲ್ಕವನ್ನು ಯಾವುದೇ ಶೀರ್ಷಿಕೆಯಡಿ ಗ್ರಾಹಕರಿಗೆ ವಿಧಿಸಲಾಗುವುದಿಲ್ಲ.

7. ಈ ಕೆಳಗಿನ ಸಂದರ್ಭಗಳಲ್ಲಿ ಹಣ ಹಿಂಪಡೆತಕ್ಕೆ ಸೇವಾ ಶುಲ್ಕವನ್ನು ಬ್ಯಾಂಕುಗಳು ತಾವೇ ನಿರ್ಧರಿಸಬಹುದಾಗಿದೆ:

(ಎ) ಕ್ರೆಡಿಟ್ ಕಾರ್ಡ್ ಮುಖಾಂತರ ಹಣ ಹಿಂಪಡೆಯುವುದು
(ಬಿ) ಹೊರದೇಶಗಳಲ್ಲಿರುವ ಎ.ಟಿ.ಯಂ.ಗಳ ಮೂಲಕ ಹಣ ಹಿಂಪಡೆಯುವುದು

8. ಸುತ್ತೋಲೆಗೆ ಸ್ವೀಕೃತಿಯನ್ನು ನಮ್ಮ ಸಂಬಂಧಿತ ಪ್ರಾದೇಶಿಕ ಕಚೇರಿಗೆ ದಯವಿಟ್ಟು ನೀಡಿ.

ನಿಮ್ಮ ವಿಶ್ವಾಸಿ

(ಕೆ. ಭಟ್ಟಾಚಾರ್ಯ)
ಮಹಾ ವ್ಯವಸ್ಥಾಪಕರು